# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಎಚ್. ರಸ್ತೆ, ತುಮಕೂರು – 572 103

ಸಂಖ್ಯೆ: ತುವಿ/ಸಂ.ವಿ:/2025-26/222 ದಿನಾಂಕ: 19.05.2025

## ಸುತ್ತೋಲೆ

ವಿಷಯ: 2026-27 ರ ಫುಲ್‌ಬ್ರೈಟ್ ನೆಹರು ಪೋಸ್ಟ್‌ಡಾಕ್ಟರಲ್ ಸಂಶೋಧನಾ ಫೆಲೋಶಿಪ್‌ಗಳ ಕುರಿತು ಮಾಹಿತಿ ಪ್ರಸಾರ.

ಉಲ್ಲೇಖ: ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರ ಪತ್ರ ಸಂಖ್ಯೆ:ಕರಾಉಶಿಪ/USIEF/2025-26/334 ದಿನಾಂಕ: 16.05.2025.

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದಲ್ಲಿ ವಿವರಿಸಿರುವಂತೆ **ಯುನೈಟೆಡ್ ಸ್ಟೇಟ್ಸ್ ಇಂಡಿಯಾ ಎಜುಕೇಷನಲ್ ಫೌಂಡೇಶನ್ (USIEF) ನೀಡುತ್ತಿರುವ 2026-27 ರ ಫುಲ್‌ಬ್ರೈಟ್ ನೆಹರು ಪೋಸ್ಟ್‌ಡಾಕ್ಟರಲ್ ಸಂಶೋಧನಾ ಫೆಲೋಶಿಪ್‌ಗಳ ಕುರಿತು ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿನ** ಆರಂಭಿಕ ವೃತ್ತಿಜೀವನದ ಬೋಧಕ ಸದಸ್ಯರಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಪೋಸ್ಟ್‌ಡಾಕ್ಟರಲ್ ಸಂಶೋಧನೆಯನ್ನು ಕೈಗೊಳ್ಳಲು ಈ ಅಂತರಾಷ್ಟ್ರೀಯ ಫೆಲೋಶಿಪ್ ಕಾರ್ಯಕ್ರಮವು ಒಂದು ಪ್ರತಿಷ್ಠಿತ ವೇದಿಕೆಯಾಗಿದೆ.

ಸದರಿ ಫೆಲೋಶಿಪ್‌ಗಳ ಮುಖ್ಯ ಉದ್ದೇಶಗಳು ಹೀಗಿವೆ.

- ಬೋಧಕರ ಶೈಕ್ಷಣಿಕ ಮತ್ತು ಸಂಶೋಧನಾ ಸಾಮರ್ಥ್ಯಗಳನ್ನು ಬಲಪಡಿಸುವುದು.
- ಅಂತರಾಷ್ಟ್ರೀಯ ಸಹಯೋಗ ಮತ್ತು ಸಂಸ್ಥೆಯ ಗೋಚರತೆಯನ್ನು ಹೆಚ್ಚಿಸುವುದು.
- ಫೆಲೋಗಳು ಮರಳಿದ ನಂತರ ಜ್ಞಾನ ವರ್ಗಾವಣೆ ಮತ್ತು ನಾವೀನ್ಯತೆಗೆ ಅನುವು ಮಾಡಿಕೊಡುವುದು.
- ಜಾಗತಿಕ ಗುಣಮಟ್ಟಕ್ಕೆ ಅನುಗುಣವಾಗಿ ಸಾಮಾಜಿಕ ವಿಜ್ಞಾನ ಸಂಶೋಧನೆಯನ್ನು ಬಲಪಡಿಸುವುದು.

ಈ ಉಪಕ್ರಮವು ಭಾರತೀಯ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಬಹಳ ಮಹತ್ವದ್ದಾಗಿದೆ. ಇದು ಅಧ್ಯಾಪಕರಿಗೆ ಅಂತರಾಷ್ಟ್ರೀಯ ಶೈಕ್ಷಣಿಕ ಪರಿಸರಕ್ಕೆ ಒಡ್ಡಿಕೊಳ್ಳಲು ಅವಕಾಶ ನೀಡುತ್ತದೆ ಮತ್ತು ಅವರು ತಮ್ಮ ಇಲಾಖೆಗಳು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಉನ್ನತ ಪರಿಣಿತಿಯೊಂದಿಗೆ ಮರಳಲು ಸಹಾಯ ಮಾಡುತ್ತದೆ.

ಈ ಸಂಬಂಧ ತುಮಕೂರು ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳು ಮತ್ತು **ವಿಶ್ವವಿದ್ಯಾನಿಲಯದಲ್ಲಿ ವಿಶೇಷವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಪಿಹೆಚ್.ಡಿ ಪಡೆದ ಸಾಮಾಜಿಕ ವಿಜ್ಞಾನ ವಿಭಾಗದ ಬೋಧಕ ಸದಸ್ಯರುಗಳು USIEF ಮೇ 27, 2025 (ಮಂಗಳವಾರ) ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.30 ರವರೆಗೆ 90 ನಿಮಿಷಗಳ ವರ್ಚುವಲ್ ಔಟ್ರೀಚ್ ಸೆಷನ್ (ಲಿಂಕ್ https://meet.google.com/vng-fprs-muv) ನಲ್ಲಿ ಭಾಗವಹಿಸುವುದು.**

ಸದರಿ ವರ್ಚುವಲ್ ಔಟ್ರೀಚ್ ಸೆಶನ್‌ನಲ್ಲಿ ಈ ಕೆಳಗಿನ ವಿಷಯಗಳನ್ನು ಒಳಗೊಂಡಿರುತ್ತದೆ.

- ಫೆಲೋಶಿಪ್‌ನ ಉದ್ದೇಶಗಳು
- ಅರ್ಜಿ ಸಲ್ಲಿಸುವ ವಿಧಾನ
- ಅರ್ಹತಾ ಮಾನದಂಡಗಳು
- USIEF ಅಧಿಕಾರಿಗಳೊಂದಿಗೆ ಸಂವಾದಾತ್ಮಕ ಪ್ರಶ್ನೋತ್ತರ

ಈ ಸಂಬಂಧ **ವಿಶ್ವವಿದ್ಯಾನಿಲಯದ ಎಲ್ಲಾ ಸಮಾಜ ವಿಜ್ಞಾನಗಳ ಅರ್ಹ ಬೋಧಕ ಸದಸ್ಯರು ಈ ಪ್ರತಿಷ್ಠಿತ ಅವಕಾಶವನ್ನು ಬಳಸಿಕೊಳ್ಳಲು ಮತ್ತು ಸದರಿ ಸೆಶನ್‌ನಲ್ಲಿ ಭಾಗವಹಿಸಿ ಫುಲ್‌ಬ್ರೈಟ್ ನೆಹರು ಪೋಸ್ಟ್‌ಡಾಕ್ಟರಲ್ ಸಂಶೋಧನಾ ಫೆಲೋಶಿಪ್‌ಗಳ ಕುರಿತು ಮಾಹಿತಿ ಪಡೆಯುವಂತೆ** ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು-ಸಂಶೋಧನೆ 20/5/2

ನಿರ್ದೇಶಕರು - ಸಂಶೋಧನೆ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಇವರಿಗೆ,

1. ಅಧ್ಯಕ್ಷರು, ಡಾ. ಡಿ. ವಿ ಗುಂಡಪ್ಪ ಅಧ್ಯಯನ ಕೇಂದ್ರ, ತು.ವಿ.ತು.
2. ಅಧ್ಯಕ್ಷರು, ಸ್ನಾತಕೋತ್ತರ ಇಂಗ್ಲೀಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
3. ಅಧ್ಯಕ್ಷರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
4. ಅಧ್ಯಕ್ಷರು, ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
5. ಅಧ್ಯಕ್ಷರು, ಸ್ನಾತಕೋತ್ತರ ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
6. ಅಧ್ಯಕ್ಷರು, ಸ್ನಾತಕೋತ್ತರ ಸಮಾಜಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
7. ಸಂಯೋಜಕರು, ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
8. ಸಂಯೋಜಕರು, ಸ್ನಾತಕೋತ್ತರ ಪತ್ರಿಕೋದ್ಯಮ & ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ತು.ವಿ.ತು.
9. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತು.ವಿ.ತು.
10. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸತಕ್ಕದ್ದು)

**ಸದರಿ ಮಾಹಿತಿಯನ್ನು ತಮ್ಮ ವಿಭಾಗದ ಅಧೀನದಲ್ಲಿರುವ ಬೋಧಕರ ಗಮನಕ್ಕೆ ತರುವುದು.**

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕುಲಸಚಿವರ ಆಪ್ತ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.